ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
HOSADIGANTHAKANNADADAILY

# ಜೈನ್ ಯುನಿವರ್ಸಿಟಿಯಲ್ಲಿ ವಿದೇಶಿ ವಿದ್ಯಾರ್ಥಿಗಳ ಸಡಗರ

**ಬೆಂಗಳೂರು :** ಇವರೆಲ್ಲ ಉನ್ನತ ವಿದ್ಯಾಭ್ಯಾಸಕ್ಕೆಂದು ವಿದೇಶಗಳಿಗೆ ಹೋಗುತ್ತಾರೆ. ಆದರೆ ಅವರೆಲ್ಲ ಉನ್ನತ ವಿದ್ಯಾಭ್ಯಾಸಕ್ಕೆಂದು ಭಾರತಕ್ಕೇ ಬರುತ್ತಾರೆ. ಇಲ್ಲಿನ ಶೈಕ್ಷಣಿಕ ಪರಂಪರೆ, ಅಧ್ಯಯನ ಶೀಲತೆಯನ್ನು ಪ್ರಶಂಸಿಸುತ್ತಾರೆ.

'ಅಧ್ಯಯನ ಶೀಲತೆ, ಅನ್ವೇಷಣೆ ವಿಷಯದಲ್ಲಿ ಭಾರತ ಜಗತ್ತಿನಲ್ಲೇ ಬಹಳ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ'

– ಹೀಗೆಂದವರು ಬೆಂಗಳೂರಿನ ಜೈನ್ ಯುನಿವರ್ಸಿಟಿಯಲ್ಲಿ ಅಂತಾರಾಷ್ಟ್ರೀಯ ಕಾರ್ಯಕ್ರಮ ವಿನಿಮಯ ವಿದ್ಯಾರ್ಥಿಯಾಗಿರುವ ಜರ್ಮನಿಯ ಆ್ಯಕ್ಸೆಲ್. ಜೈನ್ ಯುನಿವರ್ಸಿಟಿಯಲ್ಲಿ ಇಂತಹ ಅನೇಕ ವಿದೇಶಿ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಭಾರತ ಉನ್ನತ ಅಧ್ಯಯನಕ್ಕೆ ಒಂದು ಪ್ರಮುಖ ದೇಶವಾಗಿದೆ ಎಂಬುದು ಅವರೆಲ್ಲರ ಅಭಿಮತ.

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹಲವು ವಿಶ್ವವಿದ್ಯಾಲಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಶಿಕ್ಷಣ, ಅತ್ಯುತ್ತಮ ಸೌಕರ್ಯ ದೊರೆಯುತ್ತಿದೆ. ಜೊತೆಗೆ ವಿಭಿನ್ನ ವಿಶ್ವವಿದ್ಯಾಲಯಗಳ ಸಂಖ್ಯೆಯೂ ಹೆಚ್ಚುತ್ತಿದ್ದು ಜಾಗತಿಕವಾಗಿ ಹಲವು ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ.



**ಸ್ಥಳೀಯ ವಿದ್ಯಾರ್ಥಿಗಳೊಂದಿಗೆ ಜರ್ಮನ್ ವಿದ್ಯಾರ್ಥಿನಿ ಕೊರಿನಾ ಸಂಭ್ರಮ.**

ಸಣ್ಣ ಪುಟ್ಟ ಕೋರ್ಸ್‌ಗಳಿಂದ ಹಿಡಿದು ಡಾಕ್ಟರೇಟ್ ಹಂತದವರೆಗಿನ ಶಿಕ್ಷಣ ಇಲ್ಲಿ ಲಭ್ಯ. ಬೆಂಗಳೂರಿನ ಜೈನ್ ಯುನಿವರ್ಸಿಟಿಯಲ್ಲಿ 25 ದೇಶಗಳ ಸುಮಾರು 150 ಮಂದಿ ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದಾರೆ. ಅತ್ಯುನ್ನತ ಬುದ್ಧಿವಂತ ವಿದ್ಯಾರ್ಥಿಗಳನ್ನು ರೂಪಿಸುವುದೇ ನಮ್ಮ ಗುರಿ ಎಂದು ಜೈನ್ ಯುನಿವರ್ಸಿಟಿಯ ರಿಜಿಸ್ಟ್ರಾರ್ ಎನ್ ವಿ ಎಚ್ ಕೃಷ್ಣನ್ ಹೇಳುತ್ತಾರೆ.

ವಿವಿಧ ವಿಷಯಗಳಿಗೆ ಸಂಬಂಧಿಸಿದ ಕೋರ್ಸುಗಳು ಇಲ್ಲಿದ್ದು , ಜಾಗತಿಕ ಅಗತ್ಯತೆಗಳನ್ನು ಪೂರೈಸಲು ಇವು ನೆರವಾಗಿವೆ. ನಮ್ಮ ಪಾಲಿಗಂತೂ ಇದೊಂದು ಅದೃಷ್ಟದ ಅವಕಾಶ. ಭಾರತದ ಕುರಿತ ಒಳನೋಟ, ಇಲ್ಲಿನ ಸಂಸ್ಕೃತಿ ಹಾಗೂ ವ್ಯವಹಾರಗಳನ್ನು ಅರಿಯಲು ಇದು ಸಹಾಯಕ ಎನ್ನುವುದು ಜೈನ್ ವಿ.ವಿ.ಯಲ್ಲಿ ಅಧ್ಯಯನ ಮಾಡುತ್ತಿರುವ ಇನ್ನೋರ್ವ ಜರ್ಮನಿ ವಿದ್ಯಾರ್ಥಿನಿ ಕೊರಿನಾ ಅವರ ಅಭಿಮತ. ಭಾರತದಲ್ಲಿ ಕಲಿಕೆಯ ವಿಧಾನ ವೈವಿಧ್ಯಮಯ ಹಾಗೂ ಸುಸೂತ್ರವಾಗಿದೆ. ಜೈನ್ ಯುನಿವರ್ಸಿಟಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಬಗ್ಗೆ ಸೂಕ್ತ ಗಮನ ಹರಿಸುತ್ತಾರೆ ಎಂದು ಆ್ಯಕ್ಸೆಲ್ ಹೇಳುತ್ತಾರೆ.

ಉತ್ತಮ ಅಕಾಡೆಮಿಕ್ ವಾತಾವರಣ, ಸಾಂಸ್ಕೃತಿಕ ಶ್ರೀಮಂತಿಕೆ, ಜೊತೆಗೆ ಅನುಕೂಲಕರ ಹವಾಮಾನ – ಇವೆಲ್ಲವೂ ವಿದೇಶಿ ವಿದ್ಯಾರ್ಥಿಗಳಿಗೆ ಜೈನ್ ಯುನಿವರ್ಸಿಟಿ ಒಂದು ಉತ್ತಮ ಆಯ್ಕೆ ಎನಿಸಲು ಕಾರಣವಾಗಿವೆ.